ಈ ಬಾಬ್ತು ಮುದ್ದಪ್ಪನವರಿಗೆ ರೂ. 3,02,200/– ಪಾವತಿಸಬೇಕಾಗಿದ್ದು ಅವರ ಕೋರಿಕೆ ಮೇರೆಗೆ ಹಾಲಿ ಚಾಲ್ತಿಯಲ್ಲಿರುವ 03 ಚೀಟಿ ಕಂತು ಹಣವನ್ನು ಹಿಡಿದುಕೊಂಡು ಉಳಿಕೆ ಹಣವನ್ನು ಪಾವತಿಸುವಂತೆ ಕೋರಿಕೊಂಡಿದ್ದರ ಮೇರೆಗೆ ಅವರಿಂದ ಬರಬೇಕಾಗಿದ್ದ ಬಾಕಿ ಹಣ ರೂ. 2,12,200/–ಗಳನ್ನು ಕಟಾಯಿಸಿಕೊಂಡು ಉಳಿಕೆ ಮೊಬಲಗು ರೂ.90,000/– ಗಳನ್ನು ಎಸ್.ಬಿ.ಐ. ಚಾಮರಾಜನಗರ ಶಾಖೆ ಚೆಕ್ ಸಂಖ್ಯೆ:514924ರ ರೀತ್ಯಾ ದಿನಾಂಕ:13.02.2006 ರಂದು ನೀಡಲಾಗಿರುತ್ತದೆ. ಕಂಪನಿ ನಿಯಾಮಾವಳಿಗಳ ರೀತ್ಯಾ ಪೂರ್ಣ ಪ್ರಮಾಣದ ದಾಖಲೆಗಳಿಗೆ ಸಹಿ ಮಾಡದ ಕಾರಣ ದಿನಾಂಕ:14.02.2006ರಂದು ಚೆಕ್ ಬಟವಾಡೆಗೆ ಸಂಬಂಧಿಸಿದಂತೆ ಕಂಪನಿಯು ತಡೆ ಆದೇಶ ನೀಡಲಾದ ಹಿನ್ನೆಲೆಯಲ್ಲಿ, ಮುದ್ದಪ್ಪನವರು ಆ ದಿನವೇ ತಮಗೆ ಹಣ ಬೇಕೆಂದು ಒತ್ತಾಯಿಸಿ ಗುಂಪುಕಟ್ಟಿಕೊಂಡು ಕಛೇರಿಯಲ್ಲಿ ಗಲಾಟೆ ಮಾಡಿದ್ದಾರೆಂದು ವರದಿ ನೀಡಿರುತ್ತಾರೆ. ದಿನಾಂಕ:16.02.2006ರಂದು ರೂ. 85,000/–ಗಳ ಮತ್ತು ದಿನಾಂಕ:17.02.2006ರಂದು ರೂ.5,000/–ಗಳನ್ನು ಮುದ್ದಪ್ಪನವರಿಗೆ ನಗದಾಗಿ ಪಾವತಿಸಿ ಓಚರ್‌ಗಳನ್ನು ಪಡೆಯಲಾಗಿವೆಯೆಂದು ಈ ಸಂಬಂಧ ಮುದ್ದಪ್ಪ ಬಿನ್ ಬಸವರಾಜುರವರಿಗೆ ಪಾವತಿಸಲು ಯಾವುದೇ ಬಿಡ್ ಮೊತ್ತದ ಹಣ ಪಾವತಿಸಲು ಬಾಕಿಯಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ. ಮೈಸೂರು ಪ್ರಾಂತೀಯ ಚೀಟಿ ಜಂಟಿ ನಿಬಂಧಕರಿಗೆ ಪರಿವೀಕ್ಷಣೆ ಮಾಡಿ ಸಂಪೂರ್ಣ ವರದಿ ಸಲ್ಲಿಸಲು ಹಾಗೂ ಅಗತ್ಯ ಕ್ರಮವಿಡಲು ತಿಳಿಸಲಾಗಿದೆ.

14. (108) ಶ್ರೀ ಕೃಷ್ಣಮೂರ್ತಿ ಕೆ.ಎಂ. ಎಂಎಲ್‌ಎ(ಕಡೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೆಂಗಳೂರು ಮಹಾನಗರ ಪಾಲಿಕೆಯು ಕೃಷ್ಣರಾಜೇಂದ್ರ ಮಾರುಕಟ್ಟೆಯ ಕಟ್ಟಡವನ್ನು ಅಡಮಾನ ಇಟ್ಟಿರುವುದು ನಿಜವೇ; ?

ಆ) ಇದಕ್ಕೆ ಮಂಜೂರಾತಿ ನೀಡಿರುವ ಪ್ರಾಧಿಕಾರ ಯಾವುದು;

ಇ) ಯಾವ ಸಂಸ್ಥೆಯಲ್ಲಿ ಅಡಮಾನ ಇಡಲಾಗಿದೆ; ಎಷ್ಟು ಮೊತ್ತಕ್ಕೆ ಅಡಮಾನ ಇಡಲಾಗಿದೆ.

ಈ) ಇದು ಕೆ.ಎಂ.ಸಿ ಕಾಯ್ದೆ ಉಲ್ಲಂಘನೆ ಕೃತ್ಯವಲ್ಲವೇ;

ಉ) ಇದಕ್ಕೆ ಹೊಣೆ ಯಾರು (ಪೂರ್ಣ ವಿವರ ನೀಡುವುದು)?

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ಬೆಂಗಳೂರು ಮಹಾನಗರ ಪಾಲಿಕೆಯ ಕೃಷ್ಣರಾಜೇಂದ್ರ ಮಾರುಕಟ್ಟೆಯ ಕಟ್ಟಡವನ್ನು ಅಡಮಾನ ಇಟ್ಟಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

15. (92) ಶ್ರೀ ಕೃಷ್ಣಮೂರ್ತಿ ಎಂ. ಟಿ.(ತುರುವೇಕೆರೆ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಕ್ರೀಡಾಂಗಣವಿಲ್ಲದೇ ಈ ಭಾಗದ ಪ್ರತಿಭಾವಂತ ಕ್ರೀಡಾಪಟುಗಳಿಗೆ ಅಭ್ಯಾಸ ನಡೆಸಲು ಅನಾನುಕೂಲ ವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಭಾಗದ ಪ್ರತಿಭಾವಂತ ಕ್ರೀಡಾಪಟುಗಳಿಗೆ ಅನುಕೂಲವಾಗುವ ಹಿತದೃಷ್ಟಿಯಿಂದ ಇದೇ ಸಾಲಿನಲ್ಲಿ ಕ್ರೀಡಾಂಗಣ ನಿರ್ಮಿಸಿ ಅನುಕೂಲ ಮಾಡಿಕೊಡಲು ಸರ್ಕಾರವು ಕೈಗೊಳ್ಳುವ ಕ್ರಮವೇನು ?

ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು

ಅ) ಬಂದಿದೆ.

ಆ) ತುರುವೇಕೆರೆ ತಾಲ್ಲೂಕಿನಲ್ಲಿ ಕ್ರೀಡಾಂಗಣ ನಿರ್ಮಿಸಲು ಸರ್ಕಾರಿ ಪದವಿಪೂರ್ವ ಕಾಲೇಜು, ತುರುವೇಕೆರೆ ಇಲ್ಲಿಯ 4 ಎಕರೆ ಜಮೀನನ್ನು ತಾಲ್ಲೂಕು ಕ್ರೀಡಾಂಗಣ ನಿರ್ಮಾಣಕ್ಕಾಗಿ ಯುವಜನಸೇವಾ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಿಸಲಾಗಿದೆ. ಸದರಿ ಭಾಗದ ಪ್ರತಿಭಾವಂತ ಕ್ರೀಡಾಪಟುಗಳಿಗೆ ಅನುಕೂಲವಾಗುವಂತೆ ತುರುವೇಕೆರೆ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಕಾರ್ಯವನ್ನು 12ನೇ ಹಣಕಾಸಿನ ಆಯೋಗದ ಧನಸಹಾಯದಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಲಾಗುವುದು.

16,(2) ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸೊರಬ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಪೊಲೀಸ್ ಇಲಾಖೆಯಲ್ಲಿ ಪೊಲೀಸ್ ಪೇದೆಗಳು ಕಡಿಮೆ ಪ್ರಮಾಣದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಗ್ರಾಮೀಣ ಪ್ರದೇಶದಲ್ಲಿರುವ ಪೇದೆಗಳು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿವುದು ನಿಜವೇ?

ಇ) ಹಾಗಿದ್ದಲ್ಲಿ ಪರಿಹಾರ ಕ್ರಮವೇನು ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ರಾಜ್ಯ ಪೊಲೀಸ್ ಇಲಾಖೆಯ ಎಲ್ಲಾ ವಿವಿಧ ಘಟಕಗಳಲ್ಲಿ ಪೊಲೀಸ್ ಪೇದೆಗಳ ಸಾಕಷ್ಟು ಮಂಜೂರಾತಿ ಬಲ ಇರುತ್ತದೆ. ಆದರೂ ಸಹ